ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2012-13ನೇ ಸಾಲಿನಲ್ಲಿ ಬೆಳಗಾಂ ಮತ್ತು ಗುಲ್ಬರ್ಗಾ ವಿಭಾಗದ ಉತ್ತರ ಕರ್ನಾಟಕದ ಭಾಗದಲ್ಲಿ ಪರಿಶಿಷ್ಟ ವರ್ಗಗಳ ಮೆಟ್ರಿಕ್ ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಹೊಸದಾಗಿ ಪ್ರಾರಂಭಿಸಲು ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ ಇವರ ಏಕ ಕಡತ ಸಂ:ಪವಕನಿ:ಇಡಿ-2:ಸಿಆರ್-02:2012-13, ದಿ.12.09.2012

ಪ್ರಸ್ತಾವನೆ:-

ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರು ಮೇಲೆ ಓದಲಾದ ದಿ.12.09.2012ರ ಏಕಕಡತದಲ್ಲಿ 2012-13ನೇ ಸಾಲಿನಲ್ಲಿ ಈ ಕೆಳಕಂಡ 50 ಸಂಖ್ಯಾಬಲದ 8 ಮೆಟ್ರಿಕ್ ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಹೊಸದಾಗಿ ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕ್ರ. ಸಂ. | ಜಿಲ್ಲೆ | ವಿದ್ಯಾರ್ಥಿನಿಲಯ ಮಂಜೂರು ಮಾಡಬೇಕಾದ ಸ್ಥಳ | | ಬಾಲಕ/ ಬಾಲಕಿಯರು | ಜಿಲ್ಲೆಯ ಪರಿಶಿಷ್ಟ ವರ್ಗದ ಜನಸಂಖ್ಯೆ | ಡಾ.ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ/ಅತೀ ಹಿಂದುಳಿದ/ಅತ್ಯಂತ ಹಿಂದುಳಿದ ಪ್ರದೇಶಗಳ ವಿವರ |
|---|---|---|---|---|---|---|
| 1 | 2 | 3 | | 4 | 5 | 6 |
| 1 | ಗುಲ್ಬರ್ಗಾ | 1 | ಗುಲ್ಬರ್ಗಾ ಟೌನ್ | ಬಾಲಕಿಯರು | 47135 | ಹಿಂದುಳಿದ |
| 2 | ಬೆಳಗಾವಿ | 2 | ಬೆಳಗಾವಿ ಟೌನ್ | ಬಾಲಕರು | 243451 | - |
| 3 | ಹಾವೇರಿ | 3 | ಹಾವೇರಿ ಟೌನ್ | ಬಾಲಕಿಯರು | 127163 | ಹಿಂದುಳಿದ |
| 4 | ಬೀದರ್ | 4 | ಬೀದರ್ ಟೌನ್ | ಬಾಲಕರು | 182219 | - |
| 5 | ಕೊಪ್ಪಳ | 5 | ಕೊಪ್ಪಳ ಟೌನ್ | ಬಾಲಕರು | 138588 | ಅತ್ಯಂತ ಹಿಂದುಳಿದ |
| 6 | ಗದಗ್ | 6 | ಗದಗ್ ಟೌನ್ | ಬಾಲಕರು | 54410 | - |
| 7 | ಯಾದಗೀರ್ | 7 | ಯಾದಗೀರ್ ಟೌನ್ | ಬಾಲಕಿಯರು | 107060 | ಅತ್ಯಂತ ಹಿಂದುಳಿದ |
| 8 | ಬಾಗಲಕೋಟೆ | 8 | ಬಾಗಲಕೋಟೆ ಟೌನ್ | ಬಾಲಕಿಯರು | 80181 | - |

2012-13ನೇ ಸಾಲಿನಲ್ಲಿ ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಲೆಕ್ಕ ಶೀರ್ಷಿಕೆ 2225-02-277-0-35 (ಯೋಜನೆ) ಅಡಿಯಲ್ಲಿ ರೂ.50.00 ಲಕ್ಷಗಳನ್ನು ಒದಗಿಸಲಾಗಿದ್ದು ಇದರಿಂದ 8 ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಬಹುದಾಗಿದೆಯೆಂದು ತಿಳಿಸಿರುತ್ತಾರೆ. ಈ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ನಿವೇಶನವನ್ನು ಪಡೆದು ತಲಾ ರೂ.150.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಿರುವುದಾಗಿ ತಿಳಿಸಿರುತ್ತಾರೆ. ಈ ಕಾರ್ಯಕ್ರಮಕ್ಕಾಗಿ 2013-14ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 4225-02-277-7-01(ಆಶ್ರಮ ಶಾಲೆ ಮತ್ತು ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ) 4225-02-277-2-02(ಆಶ್ರಮ ಶಾಲೆ ಮತ್ತು ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ) 2225-02-283-0-02(ಗಿರಿಜನ ಉಪಯೋಜನೆಯ ಕ್ರೋಢೀಕೃತ ಅನುದಾನ) ಈ ಮೂರೂ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಅನುದಾನವನ್ನು ಭರಿಸಿಕೊಂಡು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅವಕಾಶ ಇರುವುದಾಗಿ

.....2

ತಿಳಿಸಿರುತ್ತಾರೆ. ಪ್ರತಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಕ್ಕೆ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ವಾರ್ಷಿಕ ತಗಲುವ ವೆಚ್ಚ ಕ್ರಮವಾಗಿ ರೂ.11,03,452.00 ಮತ್ತು 12,32,972.00 ಆಗಿರುವುದಾಗಿ ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ:ಸಕಇ 184 ಪವಯೋ 2012, ಬೆಂಗಳೂರು ದಿನಾಂಕ: 15-03-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ 2012-13ನೇ ಸಾಲಿನಲ್ಲಿ ಡಾ.ನಂಜುಂಡಪ್ಪ ವರದಿಯಂತೆ ಹಿಂದುಳಿದ ಪ್ರದೇಶಗಳಾದ ಈ ಕೆಳಕಂಡ ಸ್ಥಳಗಳಲ್ಲಿ 50 ಸಂಖ್ಯಾಬಲದ 4 ಬಾಲಕರ 4 ಬಾಲಕಿಯರ ಒಟ್ಟು 8 ಪರಿಶಿಷ್ಟ ವರ್ಗಗಳ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳನ್ನು ಪ್ರತಿ ವಿದ್ಯಾರ್ಥಿನಿಲಯಕ್ಕೆ ಮೇಲ್ವಿಚಾರಕರು 01, ಅಡುಗೆಯವರು 02, ಅಡುಗೆ ಸಹಾಯಕರು 01 ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ರಾತ್ರಿ ಕಾವಲುಗಾರರ 01 ಹುದ್ದೆಗಳನ್ನು ಹೊಸದಾಗಿ ಸೃಜಿಸುವುದರೊಂದಿಗೆ ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ. | ಜಿಲ್ಲೆ | ವಿದ್ಯಾರ್ಥಿನಿಲಯ ಮಂಜೂರು ಮಾಡಬೇಕಾದ ಸ್ಥಳ | | ಬಾಲಕ/ ಬಾಲಕಿಯರು | ಜಿಲ್ಲೆಯ ಪರಿಶಿಷ್ಟ ವರ್ಗದ ಜನಸಂಖ್ಯೆ | ಡಾ.ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ/ಅತೀ ಹಿಂದುಳಿದ/ಅತ್ಯಂತ ಹಿಂದುಳಿದ ಪ್ರದೇಶಗಳ ವಿವರ |
|---|---|---|---|---|---|---|
| 1 | 2 | 3 | | 4 | 5 | 6 |
| 1 | ಗುಲ್ಬರ್ಗಾ | 1 | ಗುಲ್ಬರ್ಗಾ ಟೌನ್ | ಬಾಲಕಿಯರು | 47135 | ಹಿಂದುಳಿದ |
| 2 | ಬೆಳಗಾವಿ | 2 | ಬೆಳಗಾವಿ ಟೌನ್ | ಬಾಲಕರು | 243451 | - |
| 3 | ಹಾವೇರಿ | 3 | ಹಾವೇರಿ ಟೌನ್ | ಬಾಲಕಿಯರು | 127163 | ಹಿಂದುಳಿದ |
| 4 | ಬೀದರ್ | 4 | ಬೀದರ್ ಟೌನ್ | ಬಾಲಕರು | 182219 | - |
| 5 | ಕೊಪ್ಪಳ | 5 | ಕೊಪ್ಪಳ ಟೌನ್ | ಬಾಲಕರು | 138588 | ಅತ್ಯಂತ ಹಿಂದುಳಿದ |
| 6 | ಗದಗ್ | 6 | ಗದಗ್ ಟೌನ್ | ಬಾಲಕರು | 54410 | - |
| 7 | ಯಾದಗೀರ್ | 7 | ಯಾದಗೀರ್ ಟೌನ್ | ಬಾಲಕಿಯರು | 107060 | ಅತ್ಯಂತ ಹಿಂದುಳಿದ |
| 8 | ಬಾಗಲಕೋಟೆ | 8 | ಬಾಗಲಕೋಟೆ ಟೌನ್ | ಬಾಲಕಿಯರು | 80181 | - |

ಈ ಸಂಬಂಧದ ವೆಚ್ಚವನ್ನು 2012-13ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2225-02-277-0-35 (ಯೋಜನೆ) ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.